
ಹುಕ್ಕೇರಿ ಬಸವೇಶ್ವರ ಸರ್ಕಲ್‌ನಲ್ಲಿ ರೈತರು ಪ್ರತಿಭಟನೆ ನಡೆಸಿದರು.

ಹುಕ್ಕೇರಿಯಲ್ಲೂ ಹೋರಾಟದ ಬಿಸಿ

ಹುಕ್ಕೇರಿ: ಕಬ್ಬು ಬೆಳೆಗಾರರು ತಮ್ಮ ಬೇಡಿಕೆಗಳಿಗಾಗಿ ಜೈಲ್ ಭರೋ ಚಳವಳಿಗೆ ಮುಂದಾದ ರೈತ ಸಂಘದ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಹಾಗೂ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ಅವರ ಬಂಧನದಿಂದ ರೊಚ್ಚಿಗೆದ್ದ ರೈತರಯ ದಿಢೀರ್ ಪ್ರತಿಭಟನೆ ನಡೆಸಿದರು.

ಬಸವೇಶ್ವರ ಸರ್ಕಲ್ ಬಂದ್ ಮಾಡಿ ಪ್ರತಿಭಟನೆ ನಡೆಸಿದರಲ್ಲದೆ ಮುನ್ಸೂಚನೆ ಇಲ್ಲದೆ ಕಿರಾಣಿ ಅಂಗಡಿಗಳು ಹಾಗೂ ಹೋಟೆಲ್‌ಗಳನ್ನು ಮುಚ್ಚಿಸಲಾಯಿತು. ಇದರಿಂದ ವ್ಯಾಪಾರಸ್ಥರು ತೀವ್ರ ನಷ್ಟ ಅನುಭವಿಸುವಂತಾಯಿತು.

ಶಾಲಾ-ಕಾಲೇಜುಗಳು ನಡೆಯುತ್ತಿರುವಾಗಲೇ ದಿಢೀರ್ ಬಂದ್ ಆಗಿದ್ದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಮನೆಗೆ ಮರಳಲು ಬಸ್‌ಗಳಿಲ್ಲದೆ ಪರದಾಡಿದರು. ದೀಪಾವಳಿ ಹಬ್ಬದ ಖರೀದಿಗೆಂದು ಸಂತೆಗೆ ಆಗಮಿಸಿದ್ದ ಮಹಿಳೆಯರು ಮತ್ತು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದ ವಯೋವೃದ್ಧ ರೋಗಿಗಳು ಬಸ್ ಸಂಚಾರ ಸ್ಥಗಿತಗೊಂಡು ಪರದಾಡುವಂತಾಯಿತು.


ಬೈಲಹೊಂಗಲದಲ್ಲಿ ರೈತ ಸಂಘಟನೆಯ ಮುಖಂಡರ ಬಂಧನ ಖಂಡಿಸಿ ಹಾಗೂ ಕಬ್ಬಿಗೆ ಬೆಂಬಲ ಬೆಲೆ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿ ವಿವಿಧ ರೈತ ಸಂಘಟನೆಗಳು ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: 14-CWM-UBLS-2026-27 ದಿನಾಂಕ: 29.10.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವರ್ಕ್ ಶಾಪ್‌ನಲ್ಲಿ ಬರುವ ಪೇಂಟ್ ಶಾಪ್‌ಗೆ ಬೇಕಿಂಗ್ ಓವನ್ ಇಲ್ಲದ ಸ್ಪ್ರೇ ಪೇಂಟಿಂಗ್ ಬೂತ್‌ಗಾಗಿ ಯಂತ್ರ ಸಂಖ್ಯೆ 070055673, ಮೂರು ವರ್ಷಗಳ ಅವಧಿಗೆ ಸಮಗ್ರ ವಾರ್ಷಿಕ ನಿರ್ವಹಣಾ ಒಪ್ಪಂದ.	ರೂ. 29,80,212.00 (ಜಿಎಸ್‌ಟಿ ಸೇರಿದಂತೆ)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.11.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು / ಹುಬ್ಬಳ್ಳಿ ಕಾರ್ಯಾಗಾರ / ಹುಬ್ಬಳ್ಳಿ

PUB/591/AAD/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

DOCUMENT LOST

I Sushma Suresh Patil, W/o Prabhakar Patil, R/o H.No. 344, Parvati Nagar, B.K. Kangrali, T:D:Belgaum, Karnataka. SSLC Marksheet Bearing No. 200138. Passing Year 1997. The Same Marks card has been Lost / misplaced on dated 28-10-2026. If anybody finds above said markcard Kindly inform/return the same to PSI Market yard police station Belguam. or below mentioned number.

M.No.: 9886466290

ಕೊಂಕಣ ರೈಲ್ವೆ ಕಾರ್ಪೊರೇಷನ್ ಲಿಮಿಟೆಡ್
(ಭಾರತ ಸರ್ಕಾರದ ಒಂದು ಉದ್ದಿಮೆ)

ಟೆಂಡರ್ ನೋಟಿಸ್

ಕೊಂಕಣ ರೈಲ್ವೆ ಕಾರ್ಪೊರೇಷನ್ ಲಿಮಿಟೆಡ್, ಮಡಗಾಂವ್‌ನ ವಿಭಾಗೀಯ ಎಲೆಕ್ಟ್ರಿಕಲ್ ಎಂಜಿನಿಯರ್ (ಸಂಯೋಜನೆ) ಪರವಾಗಿ, ಕೆಳಗಿನ ಕೆಲಸಕ್ಕಾಗಿ ಅನುಭವಿ ಗುತ್ತಿಗೆದಾರರಿಂದ ಮೊಹರು ಮಾಡಿದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಕೆಲಸದ ಹೆಸರು: ಕರ್ನಾಟಕ ರಾಜ್ಯದ ಕಾರವಾರ ವಲಯದ ಕೊಂಕಣ ರೈಲ್ವೆಯ ಮುರುಡೇಶ್ವರ ಮತ್ತು ಸೇನಾಪುರ ಟ್ರಾಕ್ಷನ್ ಸಬ್ ಸ್ಟೇಷನ್ (ಟಿಎಸ್‌ಎಸ್) ಗಾಗಿ 110/25ಕೆವಿ ಎಸಿಯ 2ನೇ ಬೇ ವ್ಯವಸ್ಥೆಯ ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಮಿಷನಿಂಗ್. ಇ-ಟೆಂಡರ್ ಸಂ. ಕೆಆರ್-ಕೆಡಬ್ಲ್ಯೂ-ಇಎಲ್-ಟಿ-34-2026 ದಿನಾಂಕ: 06/11/2026, ಕಾಮಗಾರಿಯ ವೆಚ್ಚ: ರೂ.164.79 ಲಕ್ಷ (ಜಿಎಸ್‌ಟಿ ಹೊರತುಪಡಿಸಿ), ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 30/11/2026 15:00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಭೇಟಿ ನೀಡಿ: www.ireps.gov.in

ಪುರಸಭೆ ಕಾರ್ಯಾಲಯ, ನರಗುಂದ.

ಜಿ: ಗದಗ, ಕರ್ನಾಟಕ -582207, ದೂ.: 08377-244227,
Email:ka.naragund.tmc@gmil.com

ಕ್ರ.ಸಂ:ಪುಸನ/ತಾಂತ್ರಿಕ/ಟೆಂಡರ/GF/2026-27. ದಿನಾಂಕ: 05-11-2026

ಕೆಪಿಪಿ-ಪ್ರೊಕ್ಯೂರಮೆಂಟ ಅಲ್ಪಾವಧಿ ಟೆಂಡರ ಪ್ರಕಟಣೆ

ಮೂಲಕವೇ ನರಗುಂದ ಪುರಸಭೆಯ' ಸಾಮಾನ್ಯ ನಿಧಿ ಅನುದಾನದ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳ ನಿರ್ವಹಣೆಗಾಗಿ "ಕೆಪಿಪಿ-ಪ್ರ್ಯೂಕ್ಯೂರ್ ಮೆಂಟ್" ಪದ್ಧತಿಯಲ್ಲಿ ನಿಗದಿತ ದಸ್ತಾವೇಜ್‌ಗಳಲ್ಲಿ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ: 20-11-2026 ರ ಸಂಜೆ 5:00 ಗಂಟೆಯ ಒಳಗಾಗಿ ಇಪ್ರೊಕ್ಯೂರಮೆಂಟ್ ಟೆಂಡರ ಸಲ್ಲಿಸುವುದು. ಇ-ಪ್ರೊಕ್ಯೂರಮೆಂಟ್ ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in/ www.naragundatown.mrc.gov.in , ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ. ಈ ಟೆಂಡರ್‌ಗಳಿಗೆ ಸಂಬಂಧಿಸಿದ ಯಾವುದೇ ತಿದ್ದುಪಡಿಗಳನ್ನು ಇಪ್ರೋಕ್ಯೂರಮೆಂಟ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಣೆ ಮಾಡಲಾಗುವುದು ಯಾವುದೇ ಪೇಪರ್ ಪ್ರಕಟಣೆ ಹೊರಡಿಸಲಾಗುವುದಿಲ್ಲ.

1) DMA/2026-27/WT/WORK_INDENT63434-4.99 Lakhs,
2) DMA/2026-27/OW/WORK_INDENT63371-1.60 Lakhs
3) DMA/2026-27/WS/WORK_INDENT61778-3.28 Lakhs
4) DMA/2026-27/OW/WORK_INDENT63370-1.44Lakhs
5) DMA/2026-27/OW/WORK INDENT63372-1.50 Lakhs
6) DMA/2026-27/IND6730

ಸಹಿ/- ಮುಖ್ಯಾಧಿಕಾರಿ, ಪುರಸಭೆ ನರಗುಂದ
ಸಹಿ/- ಆಡಳಿತಾಧಿಕಾರಿಗಳು, ಪುರಸಭೆ ನರಗುಂದ

SK CLASSIFIED

ಹುಬ್ಬಳ್ಳಿ ಆವೃತ್ತಿ ದರ

ಅಳತೆ	ದರ	ಕೊಡುಗೆ
4x5	790/-	3+1 - 5+2
4x10	1260/-	3+1 - 5+2

ಶ್ರೀಕೃಷ್ಣ ಧಾಮ ಆನಂದಾಶ್ರಮ ಟ್ರಸ್ಟ್ (ರಿ) ವೃದ್ಧಾಶ್ರಮ
ಸಲಕಿನಕೊಪ್ಪ ಗ್ರಾಮ, ಹಳಿಯಾಳ ರಸ್ತೆ, ಧಾರವಾಡ
ನಮ್ಮಲ್ಲಿ ಆಕಳು ಸೆಗಣಿಯಿಂದ ತಯಾರಾದ ಸಾವಯವ ಎರೆಹುಳು ಗೊಬ್ಬರ ಲಭ್ಯವಿದೆ. ಹಾಗೂ ಅತ್ಯುತ್ತಮ ತಳಿಯ ಆಕಳು ಮತ್ತು ಕರುಗಳು ಮಾರಾಟಕ್ಕೆ ಲಭ್ಯ. ಸಂಪರ್ಕಿಸಿ :
9845731948
9945339169
9448160068

FOR SALE
Land and Building at Tarihal Industrial Area plot No. 97
20000 sq. ft. Land
Ground Floor Building RCC
10000 sq. ft (19' height)
First floor roofing Sheet
10000 sq. ft. (18' height)
Contact No. :
9845253448

ಓದುಗರ ಗಮನಕ್ಕೆ: ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

NEFT (ನೆಫ್ಟ್) ಮೂಲಕ ಬ್ಯಾಂಕ್ ಖಾತೆಗೆ ಹಣ ಸಂದಾಯಿಸುವ ವಿವರ
1) A/c No. (ಖಾತೆ ಸಂ.) 0832000101347401
2) IFSC CODE (ಐಎಫ್ ಎಸ್ ಸಿ ಸಂಕೇತ): KARB 0000083
3) ಹಣ ಸಂದಾಯದ ಹೆಸರು: LOKA SHIKSHANA TRUST
4) ಬ್ಯಾಂಕ್ ಹೆಸರು : KARNATAKA BANK
BRANCH: KASTURBA ROAD, BANGALORE-560001.
5) ಪ್ಯಾನ್ ಸಂಖ್ಯೆ: AAATL 1086H
6) ವಿ.ಸೂ: ತಾವು ಜಮೆ ಮಾಡಿದ ಪೇ ಇನ್ ಸ್ಲಿಪ್ ಜೊತೆಗೆ ಪ್ರಕಟಿಸಬೇಕಾದ ಜಾಹೀರಾತನ್ನು ಸಂ.ಕ. ಕಚೇರಿಗೆ ಕಳುಹಿಸಬೇಕು.
* ಡಿ.ಡಿ. ಕಳಿಸುವುದಿದ್ದಲ್ಲಿ ಸಂಯುಕ್ತ ಕರ್ನಾಟಕ ಹೆಸರಿನಲ್ಲಿ ಕಳುಹಿಸಬೇಕು.

Edition	Bangalore	Gulburga	Davanagere	Mangalore	All Edition
*Disply Classified	Rs. 40-00	Rs.15-00	Rs. 15-00	Rs. 15-00	Rs.80-00

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು..... ಅಗಾಧ ಫಲಿತಾಂಶ! ಜಾಹೀರಾತಿಗಾಗಿ ಸಂಪರ್ಕಿಸಿರಿ:
ಸಂಪರ್ಕಿಸಿರಿ: ಮೊ: 9900049656
ಇ-ಮೇಲ್: skhubli@gmail.com

ಮುಖಂಡರ ವಶಪಡೆದ ಬೆನ್ನಲ್ಲೇ ತೀವ್ರ ಹೋರಾಟ | ರಾಷ್ಟ್ರೀಯ ಹೆದ್ದಾರಿ, ಗ್ರಾಮೀಣ ರಸ್ತೆಗಳಲ್ಲಿ ಸಂಚಾರ ಸ್ಥಗಿತ | ಟೈರ್ ಸುಟ್ಟು ಆಕ್ರೋಶ

ಬೆಳಗಾವಿ ಜಿಲ್ಲಾದ್ಯಂತ ಕಬ್ಬು ಹೋರಾಟದ ಕಿಚ್ಚು

ಸಂ.ಕ. ಸಮಾಚಾರ, ಬೆಳಗಾವಿ

ಕಬ್ಬಿಗೆ ನ್ಯಾಯಯುತ ದರಕ್ಕಾಗಿ ನಡೆದಿದ್ದ ರೈತರ ಹೋರಾಟ, ಮುಖಂಡರನ್ನು ಪೊಲೀಸರು ವಶಕ್ಕೆ ಪಡೆಯುತ್ತಿದ್ದಂತೆಯೇ ಗುರುವಾರ ಜಿಲ್ಲೆಯ ವಿವಿಧೆಡೆ ರೈತರು ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು.

ಹೆದ್ದಾರಿಗಳಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿದ ಪ್ರತಿಭಟನಾಕಾರರು ಗ್ರಾಮೀಣ ರಸ್ತೆಗಳಿಗೆ ಅಡ್ಡಲಾಗಿ ಕಟ್ಟಿಗೆಗಳನ್ನು ಹಾಕಿ ಸಂಚಾರ ಬಂದ್ ಮಾಡಿದರು. ಪ್ರಮುಖ ಸಂಪರ್ಕ ಮಾರ್ಗಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತು, ಪ್ರಯಾಣಿಕರು ಪರದಾಡಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಚೂನಪ್ಪ ಪೂಜೇರಿ ಅವರನ್ನು ಪೊಲೀಸರು ವಶಕ್ಕೆ ಪಡೆದಿರುವುದನ್ನು ಖಂಡಿಸಿ ಮುನವಳ್ಳಿ, ಯರಗಟ್ಟಿ, ಕಾಗವಾಡ, ಐನಾಪುರ, ಉಗಾರ ಹಾಗೂ ಕವಲಗುಡ್ಡ ಸೇರಿದಂತೆ ವಿವಿಧೆಡೆ ರೈತರು ರಸ್ತೆಗಿಳಿದರು.

ಕಬ್ಬಿಗೆ ಯೋಗ್ಯ ಬೆಲೆ ಘೋಷಿಸಬೇಕು ಹಾಗೂ ವಶಕ್ಕೆ ಪಡೆದ ಮುಖಂಡರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಕೇಂದ್ರ-ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು.

ಪೊಲೀಸ್ ವಾಹನಕ್ಕೂ ತಡೆ

ಕರಗುಪ್ಪಿ-ಪಾಶ್ಚಾಪುರ ರಸ್ತೆಯಲ್ಲಿ ಪ್ರತಿಭಟನಾಕಾರರನ್ನು ಕರೆದೊಯ್ಯುತ್ತಿದ್ದ ಮೀಸಲು ಪೊಲೀಸ್ ಪಡೆ ವಾಹನಕ್ಕೆ ರೈತರು ಅಡ್ಡಲಾಗಿ ಬೇಲಿ ಹಾಕಿ ತಡೆದರು. ಪ್ರತಿಭಟನಾಕಾರರನ್ನು ಗೋಕಾಕ ಕಡೆಗೆ ಕರೆದೊಯ್ಯುತ್ತಿದ್ದ ವೇಳೆ ಈ ಘಟನೆ ನಡೆಯಿತು. ವಾಹನದಲ್ಲಿದ್ದವರಿಗೆ ಕುಡಿಯುವ ನೀರನ್ನೂ ನೀಡದೆ ಸತಾಯಿಸಲಾಗುತ್ತಿದೆ ಎಂದು ರೈತರು ಆರೋಪಿಸಿ ಆಕ್ರೋಶ ವ್ಯಕ್ತಪಡಿಸಿದರು. ಅಸ್ವಸ್ಥಗೊಂಡ ಪ್ರತಿಭಟನಾಕಾರರಿಗೆ ಬಸಾಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.


(1) ಬೆಳಗಾವಿ ರಾಣಿ ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆಗೆ ತೆರಳುತ್ತಿದ್ದ ರೈತನನ್ನು ವಶಕ್ಕೆ ಪಡೆದ ಪೊಲೀಸರು. (2) ಬೆಳಗಾವಿ ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆಗೆ ಬಂದಿದ್ದ ರೈತರನ್ನು ಬಂಧಿಸಿ ಕರೆದೊಯ್ಯುತ್ತಿರುವ ಪೊಲೀಸರು.

ವಿದ್ಯಾರ್ಥಿಗಳ ಪರದಾಟ

ರಸ್ತೆ ತಡೆ ಪರಿಣಾಮ ಮಹಾರಾಷ್ಟ್ರದ ಮಿರಜ್‌ಗೆ ಸಂಪರ್ಕ ಕಲ್ಪಿಸುವ ಮಾರ್ಗದಲ್ಲಿ ವಾಹನಗಳು ಸಾಲುಗಟ್ಟಿ ನಿಂತವು. ಬಸ್‌ಗಳು ಸೇರಿದಂತೆ ವಾಹನಗಳ ಸಂಚಾರ ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರು ಹಾಗೂ ಶಾಲಾ ವಿದ್ಯಾರ್ಥಿಗಳು ಪರದಾಡಿದರು. ಕಬ್ಬಿನ ದರಕ್ಕಾಗಿ ಆರಂಭವಾದ ಹೋರಾಟ, ಮುಖಂಡರನ್ನು ವಶಕ್ಕೆ ಪಡೆದ ಕ್ರಮದ ವಿರುದ್ಧ ಜಿಲ್ಲೆಯ ವಿವಿಧ ಭಾಗಗಳಿಗೆ ವ್ಯಾಪಿಸಿತು.

ಮುನವಳ್ಳಿ, ಯರಗಟ್ಟಿಯಲ್ಲಿ ಟೈರ್‌ಗೆ ಬೆಂಕಿ

ಚೂನಪ್ಪ ಪೂಜೇರಿ ಅವರನ್ನು ವಶಕ್ಕೆ ಪಡೆದಿರುವುದನ್ನು ಖಂಡಿಸಿ ಸವದತ್ತಿ ತಾಲ್ಲೂಕಿನ ಮುನವಳ್ಳಿಯಲ್ಲಿ ರೈತರು ಗೋಕಾಕ-ಸವದತ್ತಿ ಸಂಪರ್ಕಿಸುವ ರಾಜ್ಯ ಹೆದ್ದಾರಿ ತಡೆದರು. ರಸ್ತೆಯಲ್ಲೇ ಟೈರ್‌ಗಳಿಗೆ ಬೆಂಕಿ ಹಚ್ಚಿ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು. ಕಬ್ಬಿನ ದರದ ಸಮಸ್ಯೆಗೆ ಪರಿಹಾರ ನೀಡುವಂತೆ ಒತ್ತಾಯಿಸಿದರು.

ಯರಗಟ್ಟಿ ಪಟ್ಟಣದಲ್ಲಿಯೂ ರೈತರು ಬೆಳಗಾವಿ-ಬಾಗಲಕೋಟೆ ಸಂಪರ್ಕಿಸುವ ಪ್ರಮುಖ ರಸ್ತೆ ಬಂದ್ ಮಾಡಿದರು. ರಸ್ತೆಯ ಮಧ್ಯೆ ಟೈರ್ ಸುಟ್ಟು ಪ್ರತಿಭಟನೆ ನಡೆಸಿದ್ದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಯಿತು.

ಕಾಗವಾಡ ತಾಲ್ಲೂಕಿನ ಐನಾಪುರ, ಉಗಾರ, ಕಾಗವಾಡ ಹಾಗೂ ಕವಲಗುಡ್ಡ ಭಾಗಗಳಲ್ಲಿ ರೈತರು ಪ್ರಮುಖ ರಸ್ತೆಗಳನ್ನು ತಡೆದು ಪ್ರತಿಭಟನೆ ನಡೆಸಿದರು. ಜೇವರ್ಗಿ-ಸಂಕೇಶ್ವರ ರಾಷ್ಟ್ರೀಯ ಹೆದ್ದಾರಿಯಲ್ಲಿಯೂ ಸಂಚಾರಕ್ಕೆ ತಡೆಯೊಡ್ಡಿದರು.

ಟೈರ್‌ಗಳಿಗೆ ಬೆಂಕಿ ಹಚ್ಚಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿರುದ್ಧ ಘೋಷಣೆ ಕೂಗಿದರು. ಕಾಗವಾಡದಲ್ಲಿ ಮಾತನಾಡಿದ ರೈತ ಮುಖಂಡ ಗಿರಿಮಲ್ಲಪ್ಪ ಅಥಣಿ, 'ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿರುವ ರೈತರಿಗೆ ಸರ್ಕಾರ ಸ್ಪಂದಿಸಬೇಕು. ಮುಖಂಡರನ್ನು ಬಂಧಿಸುವ ಮೂಲಕ ಹೋರಾಟ ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ. ಬೇಡಿಕೆ ಈಡೇರುವವರೆಗೆ ಹೋರಾಟದಿಂದ ಹಿಂದೆ ಸರಿಯುವುದಿಲ್ಲ' ಎಂದು ಹೇಳಿದರು.


ಯಕ್ಸಂಬಾ ಪಟ್ಟಣದ ಚನ್ನಮ್ಮ ವೃತ್ತದ ಬಳಿ ರೈತರು ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಯಕ್ಸಂಬಾ ಸಂಪೂರ್ಣ ಬಂದ್

ಯಕ್ಸಂಬಾ: ಪ್ರಸಕ್ತ ಸಾಲಿನ ಕಬ್ಬಿಗೆ ನ್ಯಾಯಯುತ ಬೆಲೆಗಾಗಿ ಹೋರಾಟ ನಡೆಸುತ್ತಿರುವ ರೈತ ಮುಖಂಡ ಚೂನಪ್ಪ ಪೂಜಾರಿ ಅವರನ್ನು ಬೆಳಗಾವಿಯಲ್ಲಿ ಬಂಧಿಸಿರುವ ಸುದ್ದಿ ತಿಳಿದ ಬೆನ್ನಲ್ಲೇ ಯಕ್ಸಂಬಾ ಪಟ್ಟಣ ಸಂಪೂರ್ಣವಾಗಿ ಬಂದ್ ಮಾಡಿ, ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿ ತಿಳಿದೊಡನೆ ರಸ್ತೆಗಿಳಿದ ಪಟ್ಟಣದ ರೈತರು ಚನ್ನಮ್ಮ ವೃತ್ತ ಹಾಗೂ ಬಸವ ವೃತ್ತಗಳಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಣದಿ, ನಣದಿವಾಡಿ ಮತ್ತು ಹಿರೇಕೋಡಿ ಗ್ರಾಮಗಳ ರೈತರು ಯಕ್ಸಂಬಾ-ಚಿಕ್ಕೋಡಿ ರಸ್ತೆ ತಡೆದು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಚಿಕ್ಕೋಡಿ-ಇಚಲಕರಂಜಿ ಮಾರ್ಗದ ಬೇಡಕಿಹಾಳ, ಬೋರಗಾಂವ, ನೇಜ, ಶಿರದವಾಡ ಹಾಗೂ ಯಕ್ಸಂಬಾ-ಸದಲಗಾ ಮಾರ್ಗದ ಮಲಿಕವಾಡ, ಯಾದನವಾಡಿ, ಭೈನಾಕವಾಡಿ, ಸದಲಗಾ, ಶಿರಗಾವವಾಡಿ, ಜನವಾಡ, ಒಡಗೋಲ, ಕರ್ನಾಟಕ ಕೋಡಿ ಸೇರಿದಂತೆ ಹಲವೆಡೆ ರಸ್ತೆ ತಡೆ ನಡೆಯಿತು. ಚಿಕ್ಕೋಡಿ-ಮಿರಜ್ ರಸ್ತೆಯ ಮಾಂಜರಿ, ಅಂಕಲಿ, ಯಡೂರ, ಚಂದೂರ, ಯಡೂರವಾಡಿ ಸೇರಿದಂತೆ ಬಹುತೇಕ ಗಡಿ ಗ್ರಾಮಗಳಲ್ಲಿ ರೈತರು ಬೀದಿಗಿಳಿದು ಪ್ರತಿಭಟಿಸಿದರು.

ಸಾರಿಗೆ ಬಸ್ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಪಾಲಕರು ತೀವ್ರ ಪರದಾಡುವಂತಾಯಿತು. ಹಬ್ಬದ ವೇಳೆಯಲ್ಲೇ ಗ್ರಾಮಗಳು ಬಂದ್ ಆಗಿದ್ದರಿಂದ ದೀಪಾವಳಿ ವ್ಯಾಪಾರದ ಮೇಲೆಯೂ ವಿಪರೀತ ಪರಿಣಾಮ ಬೀರಿತು.

ಕರಗುಪ್ಪಿಯಲ್ಲಿ ಪೊಲೀಸ್ ವಾಹನಕ್ಕೆ ತಡೆ

ಉಳ್ಳಾಗಡ್ಡಿ-ಖಾನಾಪುರ : ರೈತ ನಾಯಕರಾದ ಚೂನಪ್ಪ ಪೂಜೇರಿ, ಶಶಿಕಾಂತ ಗುರೂಜಿ ಬಂಧನ ಖಂಡಿಸಿ ಹುಕ್ಕೇರಿ ತಾಲೂಕಿನ ಕರಗುಪ್ಪಿಯಲ್ಲಿ ರೈತರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಇದೇ ವೇಳೆ ಬಂದ ಪೊಲೀಸ್ ವಾಹನವನ್ನೂ ರೈತರು ತಡೆದರು. ಮುಕ್ತಿಮಠದ ಬಳಿ ತಮ್ಮನ್ನು ಬಂಧಿಸಿ ಅನಗತ್ಯವಾಗಿ ಬೇರೆಡೆಗೆ ಕರೆದೊಯ್ಯುತ್ತಿದ್ದಾರೆ ಎಂದು ಪೊಲೀಸ್ ವಾಹನದಲ್ಲಿದ್ದ ಮೈಸೂರು ಮೂಲದ ರೈತರು ಪ್ರತಿಭಟನಾನಿರತರಿಗೆ ತಿಳಿಸಿದ್ದರಿಂದ ಸ್ಥಳೀಯ ರೈತರಿಗೆ ಪೊಲೀಸ್ ವಾಹನದಲ್ಲಿದ್ದ ರೈತರೂ ಸಾಥ ನೀಡಿ ಬೃಹತ್ ಪ್ರತಿಭಟನೆಗೆ ಸಾಕ್ಷಿಯಾದರು.

ಮೈಸೂರಿನಿಂದ ಆಗಮಿಸಿದ್ದ ಸುಮಾರು 25 ರೈತರನ್ನು ಪೊಲೀಸರು ಬಲವಂತವಾಗಿ ವಾಹನಕ್ಕೆ ಹಾಕಿಕೊಂಡಿದ್ದರು. ಬೆಳಗಿನಿಂದ ತಿಂಡಿ, ನೀರು ನೀಡದೆ ಕಿರುಕುಳ ನೀಡಿದ್ದಾರೆ ಹಾಗೂ ಒಬ್ಬ ರೈತನಿಗೆ ಎದೆನೋವು ಕಾಣಿಸಿಕೊಂಡರೂ ಪೊಲೀಸರು ಕರುಣೆ ತೋರಿಸದೆ ವಾಹನ ಚಲಾಯಿಸಿದ್ದಾರೆ ಎಂದು ಮೈಸೂರಿನ ರೈತ ಮುಖಂಡ ರಾಘು ಆರೋಪಿಸಿದ್ದಾರೆ.

ಕರಗುಪ್ಪಿ ರಸ್ತೆಯಲ್ಲಿ ಗಿಡ-ಗಂಟಿಗಳನ್ನು ಹಾಕಿ ರಸ್ತೆ ತಡೆದ ಸ್ಥಳೀಯ ರೈತರು, ಪೊಲೀಸರ ಕಾರ್ಯವೈಖರಿ ತೀವ್ರವಾಗಿ ಖಂಡಿಸಿದರು. ಮಾನವೀಯತೆ ಮರೆತು ವರ್ತಿಸಿದ ಹಾಗೂ ಕರ್ತವ್ಯ ಲೋಪ ಎಸಗಿದ ಪೊಲೀಸ್ ಸಿಬ್ಬಂದಿಯನ್ನು ತಕ್ಷಣವೇ ಅಮಾನತುಗೊಳಿಸಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಶ್ರೀಕಾಂತ್ ಹಿರೇಮಠ, ಶಂಕರ್ ಪಾಟೀಲ್ ಹಾಗೂ ಇತರ ಸ್ಥಳೀಯ ರೈತರು ಉಪಸ್ಥಿತರಿದ್ದರು.


ಬಂಧನಕ್ಕೊಳಗಾಗಿ ಕರಗುಪ್ಪಿಗೆ ಬಂದ ರೈತ ಮುಖಂಡ ಪ್ರತಿಭಟನೆಯಲ್ಲಿ ಮಾತನಾಡಿದರು.

ಜೈಲ್ ಭರೋ ಚಳವಳಿಗೆ ಮುಂದಾಗುತ್ತಿದ್ದ ರೈತ ಸಂಘದ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ, ಗೌರವಾಧ್ಯಕ್ಷ ಶಶಿಕಾಂತ ಗೂರುಜಿ ಹಾಗೂ ರೈತ ಸಂಘದ ಮುಂಚೂಣಿ ನಾಯಕರನ್ನು ಪೊಲೀಸರು ಬಂಧಿಸಿರುವುದನ್ನು ಖಂಡಿಸಿ ಘಟಪ್ರಭಾದಲ್ಲಿ ರೈತರು ರಸ್ತೆ ತಡೆ ನಡೆಸಿ ರೈತ ಮುಖಂಡರ ಬಿಡುಗಡೆಗೆ ಆಗ್ರಹಿಸಿದರು. ರೈತರ ಹಠಾತ್ ಪ್ರತಿಭಟನೆಯಿಂದ ಸಂಚಾರ ಅಸ್ತವ್ಯಸ್ತಗೊಂಡು ಪ್ರಯಾಣಿಕರು ಪರದಾಡಿದರು.




ಕೌಜಲಗಿಯ ಕಳ್ಳಿಗುದ್ದಿ ರಸ್ತೆ ವೃತ್ತದಲ್ಲಿ ಟೈರ್‌ಗೆ ಬೆಂಕಿ ಹಚ್ಚಿ ರೈತರು ಪ್ರತಿಭಟಿಸುತ್ತಿರುವುದು.

ಕೌಜಲಗಿ ಬಂದ್; ಆಕ್ರೋಶ

ಕೌಜಲಗಿ: ಬೆಳಗಾವಿಯ ಮುಕ್ತಿ ಮಠದ ಬಳಿ ರೈತ ಮುಖಂಡರಾದ ಚೂನಪ್ಪ ಪೂಜಾರಿ ಹಾಗೂ ಶಶಿಕಾಂತ ಗುರೂಜಿ ಅವರನ್ನು ಪೊಲೀಸರು ಬಂಧಿಸಿದ್ದನ್ನು ಖಂಡಿಸಿ ಗುರುವಾರ ಕೌಜಲಗಿ ಬಂದ್ ಯಶಸ್ವಿಯಾಗಿ ನಡೆಯಿತು.

ಬಂಧನದ ಸುದ್ದಿ ತಿಳಿಯುತ್ತಿದ್ದಂತೆ ರೈತರು ಪಟ್ಟಣದ ಪ್ರಮುಖ ರಸ್ತೆಗಳನ್ನು ಬಂದ್ ಮಾಡಿಸಿದರು. ವ್ಯಾಪಾರಿಗಳು ಸ್ವಯಂಪ್ರೇರಿತರಾಗಿ ಅಂಗಡಿ-ಮುಂಗಟ್ಟು ಮುಚ್ಚಿ ಬೆಂಬಲ ನೀಡಿದರು. ಕಳ್ಳಿಗುದ್ದಿ ರಸ್ತೆಯ ವೃತ್ತದಲ್ಲಿ ಜಮಾಯಿಸಿದ ರೈತರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಟೈರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ರೈತ ಮುಖಂಡ ಜ್ಞಾನೇಶ್ ಮಾತನಾಡಿ, ಸರ್ಕಾರ ರೈತರ ಹೋರಾಟವನ್ನು ಹತ್ತಿಕ್ಕಲು ಯತ್ನಿಸುತ್ತಿದೆ. ಬಂಧಿತ ಮುಖಂಡರನ್ನು ತಕ್ಷಣ ಬಿಡುಗಡೆ ಮಾಡಬೇಕು ಮತ್ತು ಪ್ರತಿ ಟನ್ ಕಬ್ಬಿಗೆ 5,500 ರೂ. ಬೆಂಬಲ ಬೆಲೆ ಘೋಷಿಸಬೇಕು" ಎಂದು ಆಗ್ರಹಿಸಿದರು. ಬಂದ್ ಹಿನ್ನೆಲೆಯಲ್ಲಿ ಬಸ್ ಸಂಚಾರ, ಬ್ಯಾಂಕ್ ಹಾಗೂ ಸೊಸೈಟಿಗಳು ಸ್ಥಗಿತಗೊಂಡು ಪ್ರಯಾಣಿಕರು ಪರದಾಡಿದರು.



ರಾಯಬಾಗ ಪಟ್ಟಣದ ಅಭಾಜಿ ವೃತ್ತದ ಬಳಿ ರೈತರು ರಸ್ತೆ ತಡೆದು ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟನೆ ನಡೆಸಿದರು.

ರಾಯಬಾಗದಲ್ಲಿ ಆಕ್ರೋಶ

ರಾಯಬಾಗ : ಜೈಲ್ ಭರೋ ಕಾರ್ಯಕ್ರಮಕ್ಕೆ ತೆರಳುತ್ತಿದ್ದಾಗ ರೈತ ಮುಖಂಡರುಗಳಾದ ಚೂನಪ್ಪ ಪೂಜೇರಿ, ಶಶಿಕಾಂತ ಗೂರೂಜಿ ಬಂಧನ ಖಂಡಿಸಿ ಪಟ್ಟಣದ ಅಭಾಜಿ ವೃತ್ತದಲ್ಲಿ ರೈತರು ಟೈರ್‌ಗೆ ಬೆಂಕಿ ಹಚ್ಚಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ತಾಲೂಕಿನ ಕುಡಚಿ, ಅಳಗವಾಡಿ, ಕಟಕಬಾವಿ ಕ್ರಾಸ್ ಹಾಗೂ ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಪ್ರತಿಭಟನೆ ನಡೆಸಿದ ರೈತರು ತಮ್ಮ ನಾಯಕರನ್ನು ಬಿಡುಗಡೆಗೊಳಿಸದಿದ್ದರೆ ಅಹೋರಾತ್ರಿ ಹೋರಾಟ ನಡೆಸುವುದಾಗಿ ರೈತ ಮುಖಂಡ ರಮೇಶ ಕುಂಬಾರ ತಿಳಿಸಿದ್ದಾರೆ.

ಲಕ್ಷಾಂತರ ರೈತರ ಹೋರಾಟ ಶಾಂತಿಯುತವಾಗಿ ಸತತವಾಗಿ ಒಂದು ತಿಂಗಳಿಂದ ನಡೆದಿದ್ದರೂ ಇಲ್ಲಿಯವರೆಗೆ ಯಾವುದೇ ಅಹಿತಕರ ಘಟನೆಗಳು ನಡೆದಿರಲಿಲ್ಲ. ಆದರೆ ಈಗ ಪೊಲೀಸರು ಅವರನ್ನೇಕೆ ಬಂಧಿಸಿದ್ದೀರಿ ಎಂದು ಪ್ರಶ್ನಿಸಿದರು. ಪ್ರತಿಭಟನೆಯಲ್ಲಿ ಸಂಜು ಬಾವಚೆ, ಲಕ್ಷ್ಮಣ ಬಂತೆ, ಅಜಿತ ಪೂಜಾರಿ, ಬೀರಪ್ಪ ವಂಟಮೂರೆ, ಚೇತನ ನಾಯಿಕ ಹಾಗೂ ರೈತರು ಪಾಲ್ಗೊಂಡಿದ್ದರು.


ಸುರೇಬಾನ-ಮನಿಹಾಳ ಗ್ರಾಮದಲ್ಲಿ ರೈತರು ರಸ್ತೆ ಸಂಚಾರ ಬಂದ್ ಮಾಡಿ, ಪ್ರತಿಭಟನೆ ನಡೆಸಿದರು.

ರಾಮದುರ್ಗ ತಾಲೂಕಿನಲ್ಲಿ ಪ್ರತಿಭಟನೆ ಬಿಸಿ

ರಾಮದುರ್ಗ : ಬೆಳಗಾವಿಯಲ್ಲಿ ರೈತ ನಾಯಕರ ಬಂಧನದಿಂದ ರೊಚ್ಚಿಗೆದ್ದ ರೈತರು ತಾಲೂಕಿನಾದ್ಯಂತ ರಸ್ತೆ ತಡೆದು, ಪ್ರತಿಭಟನೆ ನಡೆಸಿದರು. ಪಟ್ಟಣದ ಸಂಗೊಳ್ಳಿ ರಾಯಣ್ಣ ಸರ್ಕಲ್‌ನಲ್ಲಿ ಜಮಾಯಿಸಿದ ರೈತ ಸಂಘದ ಮುಖಂಡರು ಹಾಗೂ ರೈತರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿಯೂ ಸಹ ಹಲವು ರೈತರನ್ನು ಬಂಧಿಸಲಾಯಿತು. ತಾಲೂಕಿನ ಸುರೇಬಾನ-ಮನಿಹಾಳ ಗ್ರಾಮದಲ್ಲಿ ರಾಮದುರ್ಗ-ಕೊಣ್ಣೂರ ಮುಖ್ಯ ರಸ್ತೆ ಬಂದ್ ಮಾಡಿ ಪ್ರತಿಭಟಿಸಿದರು. ಸುರೇಬಾನ ಪೊಲೀಸರು ರೈತರನ್ನು ಬಂಧಿಸಿ, ನಂತರ ಬಿಡುಗಡೆ ಮಾಡಿದ ಘಟನೆ ನಡೆಯಿತು.

ಬೆಳಗಾವಿ-ಬಾಗಲಕೋಟೆ ರಾಜ್ಯ ಹೆದ್ದಾರಿ ಪಂಚಗಾವಿ ಕ್ರಾಸ್, ಸಾಲಹಳ್ಳಿ, ಕೆ.ಚಂದರಗಿ ಹಾಗೂ ಕಟಕೋಳ ಗ್ರಾಮದಲ್ಲಿ ರೈತರು ಕೆಲಕಾಲ ಬಂದ್ ಮಾಡಿ, ರಾಜ್ಯ ಹಾಗೂ ಕೇಂದ್ರ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ರೈತರನ್ನು ಪೊಲೀಸರು ವಶಕ್ಕೆ ಪಡೆದು, ವಾತಾವರಣ ಸಹಜ ಸ್ಥಿತಿ ಬಂದ ನಂತರ ಬಿಡುಗಡೆ ಮಾಡಿದರು.

ರೈತ ಮುಖಂಡರಾದ ಮಲ್ಲಿಕಾರ್ಜುನ ರಾಮದುರ್ಗ, ನಿಂಗನಗೌಡ ಪಾಟೀಲ, ಮಾರುತಿ ಕುಂಬಾರ, ಮಲ್ಲಪ್ಪ ಮೇಟಿ, ಗೋಪಾಲ ಪಾತಾಳಿ, ತಿರಕಪ್ಪ ಬಾಡಗಾರ, ಶಿವಾನಂದ ದೊಡವಾಡ, ಯಲ್ಲಪ್ಪ ದೊಡಮನಿ, ಈರಣ್ಣ ರಾಜನಾಳ, ನಿಂಗಪ್ಪ ಕೂಗಿ, ಸಂಗಪ್ಪ ನರನೂರ, ಸುರೇಶ ನಂದೆಪ್ಪನವರ, ಈರಣ್ಣ ಚಿಕ್ಕರಡ್ಡಿ, ಮಹಾದೇವ ತ್ಯಾವಟಗಿ, ಅಬ್ದುಲಸಾಬ ಯಾದವಾಡ, ಈರನಗೌಡ ಪಾಟೀಲ, ಬಾಳಪ್ಪ ಚುಂಚನೂರ, ಅಪ್ಪಣ್ಣ ಗುದಗಿ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ರೈತ ಮುಖಂಡರು ಹಾಗೂ ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

सेन्ट्रल बैंक ऑफ़ इंडिया
Central Bank of India
1911 से आपके लिए ''केंद्रित'' "CENTRAL" TO YOU SINCE 1911

REGIONAL OFFICE SOLAPUR
Sai Ved Divine, Near Shivdare Arts and Commerce College, Jule Solapur Dist. - Solapur, (MH)
Pin: 413004 Phone No.: 0217-2728133 E-mail : recvsolaro@centralbank.bank.in

"APPENDIX- IV-A"
[See proviso to rule 8 (6)]

ಸ್ಥಿರಾಸ್ತಿಯ ಮಾರಾಟಕ್ಕೆ ಮಾರಾಟದ ಸೂಚನೆ

ಸ್ಥಿರಾಸ್ತಿಗಳ ಇ-ಹರಾಜು ಮಾರಾಟ ಸೂಚನೆ. ಭದ್ರತೆಯ ಅಡಿಯಲ್ಲಿ ಮತ್ತು ಹಣಕಾಸು ಆಸ್ತಿಗಳ ಪುನರ್‌ನಿರ್ಮಾಣ ಮತ್ತು ಭದ್ರತಾ ಬಡ್ಡಿ ಕಾಯ್ದೆ 2002 (2002ರ ಪ್ರಕಾರ 6 ವರೆಗೆ ಓದಿ) 2002 ರ ಸುರಕ್ಷತಾ ಆಸಕ್ತಿ(ಜಾರಿ) ನಿಯಮಗಳ ಅಡಿಯಲ್ಲಿ.

ಹಣಕಾಸು ಸ್ವತ್ತುಗಳ ಭದ್ರತೆ, ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಕಾಯ್ದೆ, 2002 (SARFAESI ACT) ಅಡಿ ಹಾಗೂ ಭದ್ರತಾ ಆಸಕ್ತಿ (ಜಾರಿ) ನಿಯಮ 2002ರ ನಿಯಮ 8(6)ರ ಅಡಿ ಇ-ಹರಾಜು ಮೂಲಕ ಕರೆಯಲಾದ ಸ್ಥಿರಾಸ್ತಿಗಳ ಮಾರಾಟದ ನೋಟಿಸ್.

ಸಾರ್ವಜನಿಕರಿಗೆ ಸಾಮೂಹಿಕವಾಗಿ ಹಾಗೂ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ಪ್ರತ್ಯೇಕವಾಗಿ ನೋಟಿಸ್ ಜಾರಿ ಮಾಡಿದ್ದು, ಈ ಮೂಲಕ ತಿಳಿಸುವುದೇನೆಂದರೆ, ಸುರಕ್ಷಿತ ಸಾಲಗಾರರಿಗೆ ಅಡಮಾನ ಮಾಡಲಾದ/ಅಧಿಕಾರ ನೀಡಲಾದ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಸುರಕ್ಷಿತ ಸಾಲದಾತರಾದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕೃತ ಅಧಿಕಾರಿಗಳು ಚಿನ್ನಾತ್ಮಕ ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ಖಾಸಗಿ ಒಪ್ಪಂದದ ಪ್ರಕಾರ ಬ್ಯಾಂಕ್‌ಗೆ ಸಮ್ಮತವಾಗುವ ನಿಯಮಗಳ ಅನುಸಾರ 'ಎಲ್ಲಿದೆಯೋ ಹಾಗೆ' ಮತ್ತು 'ಸ್ವತ್ತು ಹೇಗಿದೆಯೋ ಹಾಗೆ' ಹಾಗೂ 'ಏನಿದೆಯೋ ಇದ್ದ ಹಾಗೆ' ಸ್ಥಿತಿಯಲ್ಲಿ ಈ ಆಸ್ತಿಗಳನ್ನು ದಿನಾಂಕ : 25-11-2026 ರಂದು ಆನ್‌ಲೈನ್ ವೆಬ್ ಪೋರ್ಟಲ್ https://BAANKNET.COM) ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಗೆ ಬರಬೇಕಾಗಿರುವ ಬಾಕಿ ಮೊತ್ತವನ್ನು ವಸೂಲಿ ಮಾಡಲು ಹರಾಜು ಮಾಡಲಾಗುವುದು. ಇ-ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು https://www.centralbankofindia.co.in ಅನ್ನು ನೋಡಿ. ಆಸಕ್ತ ಬಿಡ್‌ದಾರರು 'PSB Alliance Baanknet' ವಾಲೆಟ್ ಮೂಲಕ ಪೂರ್ವ ಬಿಡ್ ಇಎಂಡಿ ಮೊತ್ತವನ್ನು ಜಮಾ ಮಾಡಬಹುದು. ಕೊನೆಯ ಕ್ಷಣದ ಸಮಸ್ಯೆಗಳನ್ನು ತಪ್ಪಿಸಲು, ಇ-ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವ ಬಿಡ್‌ದಾರು ಇ-ವಾಲೆಟ್ ಮೂಲಕ ಮುಂಚಿತವಾಗಿಯೇ ಪಾವತಿ ಮಾಡಬೇಕಾಗುತ್ತದೆ.

ಕ್ರ ಸ	ಸಾಲಗಾರರ ಹೆಸರು	ಬಾಕಿ ಮೊತ್ತ	ಸ್ಥಿರಾಸ್ತಿಯ ವಿವರಗಳು	ಮೀಸಲು ಬೆಲೆ (ರೂ)	ಇಎಂಡಿ ಮೊತ್ತ (ರೂ)	ಸ್ಥಿರಾಸ್ತಿಯನ್ನು ವೀಕ್ಷಿಸಲು ಕೊನೆಯ ದಿನಾಂಕ ಮತ್ತು ಸಮಯ
1	ಶ್ರೀ ರೂಪೇಶ ರಾವಸಾಹೇಬ ಗೌರವಾಡೆ (ಸಾಲಗಾರರು) ವಿಳಾಸ: ಪೋಸ್ಟ ಮಮದಾಪುರ, ತಾಲೂಕ: ಚಿಕ್ಕೋಡಿ, ಜಿ: ಬೆಳಗಾವಿ, ಕರ್ನಾಟಕ: 591211 ಪಂಚುಂಬರಿ ಶಾಖೆ	ರೂ. 70,75,482/- (ಎಪ್ಪತ್ತು ಲಕ್ಷ ಎಪ್ಪತ್ತೈದು ಸಾವಿರ ನಾಲ್ಕು ನೂರ ಎಂಬತ್ತೆರಡು ರೂಪಾಯಿಗಳು) (ಅಸಲು ಮತ್ತು ಬಡ್ಡಿ 23.01.2025 ರವರೆಗೆ) ಜೊತೆಗೆ ಹೆಚ್ಚುವರಿ ಬಡ್ಡಿ, ಪ್ರಾಸಂಗಿಕ ವೆಚ್ಚಗಳು ಮತ್ತು ಅದರ ಮೇಲಿನ ವೆಚ್ಚಗಳು ಹಾಗೂ ಅದರಿಂದ ಏನಾದರೂ ಹೆಚ್ಚುವರಿ ವಸೂಲಾತಿ ಯಾಗಿದ್ದರೆ ಅದನ್ನು ಕಳೆದು.	ಸೋಮನಾಥ ಮಂದಿರ, ನಿಪ್ಪಾಣಿ ಗ್ರಾಮ, ತಾಲೂಕ ನಿಪ್ಪಾಣಿ, ನಿಪ್ಪಾಣಿ ಉಪವಿಭಾಗಾಧಿಕಾರಿಗಳ ವ್ಯಾಪ್ತಿಯಲ್ಲಿರುವ ಬೆಳಗಾವಿ ಜಿಲ್ಲೆಯಲ್ಲಿರುವ ಎನ್.ಎ.ಆರ್.ಎಸ್. ನಂ 178ಎಫ್, ಪ್ಲಾಟ್ ನಂ. 11 ರಲ್ಲಿರುವ ಪೂರ್ವ-ಪಶ್ಚಿಮ: 30 ಅಡಿ, ಉತ್ತರ-ದಕ್ಷಿಣ: 48.4 ಅಡಿ, ಒಟ್ಟು: 1452.06 ಚ.ಅಡಿ, ಇದರ ವಿಸ್ತೀರ್ಣ 0ಎ-01 ಗುಂಟೆ-05ಎ-35 ಪೈ ಜಾಗದಲ್ಲಿರುವ ಕಟ್ಟಡ ಇದರ ವಿಸ್ತೀರ್ಣ: ನೆಲ ಮಹಡಿ ಬಿಲ್ಟ್ ಅಪ್ ವಿಸ್ತೀರ್ಣ: 942.00 ಚ.ಅಡಿ, ಮೊದಲನೇ ಮಹಡಿ: 942.00 ಚ.ಅಡಿ ಹೊಂದಿರುವ ಶ್ರೀ ರೂಪೇಶ ರಾವಸಾಹೇಬ ಗೌರವಾಡೆ ಇವರ ಹೆಸರಿನಲ್ಲಿರುವ ಆಸ್ತಿ ಎಲ್ಲ ಸ್ವತ್ತುಗಳೊಂದಿಗೆ **ಚಕಬಂದಿ:** ಪೂರ್ವ: ಎನ್.ಎ.ಆರ್.ಎಸ್. ನಂ 178ಎಫ್/ಪ್ಲಾಟ್ ನಂ. 12 **ದಕ್ಷಿಣ:** ಶ್ರೀ ಅಶೋಕ ಜಾಧವ ಅವರ ಆಸ್ತಿ **ಪಶ್ಚಿಮ:** ಎನ್.ಎ.ಆರ್.ಎಸ್.ನಂ 178ಎಫ್/ಪ್ಲಾಟ್ ನಂ. 10 **ಉತ್ತರ:** 9 ಮೀ ಅಗಲದ ರಸ್ತೆ **ಸ್ವಾಧೀನತೆ ವಿವರ:** ಚಿನ್ನಾತ್ಮಕ	ರೂ. 57,37,000/- (ಐವತ್ತೇಳು ಲಕ್ಷ ಮೂವತ್ತೇಳು ಸಾವಿರ ರೂಪಾಯಿಗಳು)	ರೂ. 5,73,700/- (ಐದು ಲಕ್ಷ ಎಪ್ಪತ್ಮೂರು ಸಾವಿರದ ಏಳು ನೂರು ರೂಪಾಯಿಗಳು)	ಇ-ಹರಾಜಿನ ದಿನಾಂಕದವರೆಗೆ

ಇದನ್ನು, ಮೇಲೆ ತಿಳಿಸಲಾದ ದಿನಾಂಕದಂದು ನಡೆಯಲಿರುವ ಇ-ಹರಾಜು ಮಾರಾಟದ ಕುರಿತು ಸದರಿ ಸಾಲದ ಸಾಲಗಾರರು ಮತ್ತು ಜಾಮೀನುದಾರರಿಗೆ, ಭದ್ರತೆ(ಜಾರಿ) ನಿಯಮಗಳು, 2002ರ ನಿಯಮ 8(6)/ನಿಯಮ 9(1) ರ ಅಡಿಯಲ್ಲಿ ನೀಡಲಾದ ಸೂಚನೆ ಎಂದೂ ಪರಿಗಣಿಸಬಹುದು.

ಆಸಕ್ತ ಬಿಡ್‌ದಾರರು ಇ-ಹರಾಜಿನಲ್ಲಿ ಭಾಗವಹಿಸಲು ವೆಬ್‌ಪೋರ್ಟಲ್ https://baanknet.com/eauction-psb/bidder-registration ಮೂಲಕ ನೋಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸವರ್ಡ್ ಪಡೆಯಬೇಕು. ಬಿಡ್ಡದಾರರು ಪಾಸ್‌ವರ್ಡ್‌ಅನ್ನು ಬದಲಾಯಿಸಿಕೊಳ್ಳಬೇಕು. ಇ-ಹರಾಜಿನ ಪ್ರಕ್ರಿಯೆಯ ಬಗ್ಗೆ ತಿಳಿದುಕೊಳ್ಳಲು https://BAANKNET.COM) ನೋಡಿ. ಇ-ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು https://www.centralbankofindia.co.in ಅನ್ನು ನೋಡಿ.

ಬಿಡ್‌ದಾರರು https://baanknet.com ದಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಕೆ.ವಾಯ್.ಸಿ. ದಾಖಲೆಗಳನ್ನು ಸಲ್ಲಿಸಬೇಕು. ಕೆ.ವಾಯ್.ಸಿ. ದಾಖಲೆಗಳ ಪರಿಶೀಲನೆಯ ನಂತರ ಇ-ವ್ಯಾಲೆಟ್ ಮುಖಾಂತರ ಇಎಮ್‌ಡಿ ಮೊತ್ತವನ್ನು NEFT ಮಾಡಬೇಕು. (ಚಾಲನ್ ಅನ್ನು https://baanknet.com ದಲ್ಲಿ ಪಡೆಯಬೇಕು).

ಹೆಚ್ಚಿನ ವಿವರಗಳಿಗಾಗಿ ಡಾ. ರಾಕೇಶ್‌ಕುಮಾರ ರಾಜ್ ಮೊ: 9679632560 ಇವರನ್ನು ಸಂಪರ್ಕಿಸಿ.

ನಿಯಮಗಳು ಮತ್ತು ಷರತ್ತುಗಳು ಕಟ್ಟುನಿಟ್ಟಾಗಿ ಭದ್ರತಾ ಆಸಕ್ತಿಯ ನಿಯಮಗಳ (ಜಾರಿ) ನಿಯಮಗಳು, 2002ರ ನಿಬಂಧನೆಗಳ ಪ್ರಕಾರ ಇರಬೇಕು.

ಸರ್ಫೇಸಿ ಕಾಯ್ದೆ, 2002ರ ನಿಯಮ 8(6)ರ ಅಡಿಯಲ್ಲಿ 15 ದಿನಗಳ ಶಾಸನಬದ್ಧ ಮಾರಾಟದ ನೋಟಿಸ್.

ದಿನಾಂಕ: 05-11-2026
ಸ್ಥಳ: ಸೊಲ್ಲಾಪುರ
ಸಹಿ/- ಅಧಿಕೃತ ಅಧಿಕಾರಿಗಳು/ಮುಖ್ಯ ಪ್ರಬಂಧಕರು